# ಕರ್ನಾಟಕ ಸರ್ಕಾರದ ನಡವಳಿ

ವಿಷಯ: ಶ್ರೀ ಸಹದೇವ ಮಾಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಿಶ್ರಕೋಟಿ ಗ್ರಾಮ ಪಂಚಾಯತಿ (ಪ್ರಸ್ತುತ ಜಿನ್ನೂರ್ ಗ್ರಾ.ಪಂ.), ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ವಿರುದ್ಧ ಮಾನ್ಯ ಉಪಲೋಕಾಯುಕ್ತ ವರದಿಯ ಶಿಫಾರಸ್ಸಿನನ್ವಯ ಕ್ರಮವಹಿಸುವ ಬಗ್ಗೆ.

**ಓದಲಾಗಿದೆ:**

1) ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 521 ಗ್ರಾಪಂಕಾ 2016, ದಿನಾಂಕ 12.09.2016
2) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರ ಅ.ಸ.ಪ.ಸಂ. ಉಪಲೋಕ್-1/ಡಿಇ-379/2016/ಎಆರ್‌ಇ-8, ದಿನಾಂಕ 03.02.2018
3) ಸರ್ಕಾರದ ಸಮಸಂಖ್ಯೆಯ ಎರಡನೇ ಕಾರಣ ಕೇಳಿ ನೋಟೀಸ್, ದಿನಾಂಕ 24.02.2018
4) ಶ್ರೀ ಸಹದೇವ ಮಾಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಿಶ್ರಕೋಟಿ ಗ್ರಾಮ ಪಂಚಾಯತಿ (ಪ್ರಸ್ತುತ ಜಿನ್ನೂರ್ ಗ್ರಾ.ಪಂ.), ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಸಲ್ಲಿಸಿರುವ ಉತ್ತರ, ದಿನಾಂಕ 08.06.2018.........

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ, ಶ್ರೀ ಸಹದೇವ ಮಾಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಿಶ್ರಕೋಟಿ ಗ್ರಾಮ ಪಂಚಾಯತಿ (ಪ್ರಸ್ತುತ ಜಿನ್ನೂರ್ ಗ್ರಾ.ಪಂ.), ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರು 2013-14 ನೇ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಅಡಿಯಲ್ಲಿ ಎಸಗಿರುವ ಹಣ ದುರುಪಯೋಗದ ಬಗ್ಗೆ ಲೋಕಾಯುಕ್ತ ಸಂಸ್ಥೆಯಲ್ಲಿ ದಾಖಲಾಗಿರುವ ದೂರಿನ ಸಂಬಂಧ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ(ವನಿಮೇ) ನಿಯಮಾವಳಿಗಳು, 1957ರ ನಿಯಮ 14ಎ ರಡಿ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಲಾಗಿದೆ.

ಮೇಲೆ ಓದಲಾದ (2) ರಲ್ಲಿ, ಸದರಿ ಪ್ರಕರಣದ ಕುರಿತು ವಿಚಾರಣೆ ನಡೆಸಲು ಅಪರ ನಿಬಂಧಕರು ವಿಚಾರಣೆಗಳು-8, ಕರ್ನಾಟಕ ಲೋಕಾಯುಕ್ತ ರವರನ್ನು ನೇಮಿಸಲಾಗಿದ್ದು, ವಿಚಾರಣಾಧಿಕಾರಿಯು ಕೆಳಕಂಡ ಆರೋಪದ ಮೇಲೆ ವಿಚಾರಣೆ ನಡೆಸಿ, ಶ್ರೀ ಸಹದೇವ ಮಾಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಿಶ್ರಕೋಟಿ ಗ್ರಾಮ ಪಂಚಾಯತಿ (ಪ್ರಸ್ತುತ ಜಿನ್ನೂರ್ ಗ್ರಾ.ಪಂ.), ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ವಿರುದ್ಧದ ಆರೋಪಗಳು ಸಾಬೀತಾಗಿರುವುದಾಗಿ ವರದಿ ಮಾಡಿರುತ್ತಾರೆ.

> "2013-14 ನೇ ಸಾಲಿನಲ್ಲಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸಂಬಂಧಪಟ್ಟ ಬಾಳರಾಮ ಕೆರೆ ಕಾಮಗಾರಿಗೆ ರೂ.4.00ಲಕ್ಷ ಅನುಮೋದನೆಯಾಗಿದ್ದು, ಅದರಲ್ಲಿ ರೂ.2,99,628/-. ಮೊತ್ತದ ಕೂಲಿ ವೆಚ್ಚವನ್ನು 3 ಹಂತಗಳಲ್ಲಿ ಭರಿಸಿದ್ದು, ಸದರಿ ಕಾಮಗಾರಿಗಳಲ್ಲಿ ಕಾರ್ಮಿಕರ ಖಾತೆಗಳಿಗೆ ಹಣ ಜಮಾ ಆಗಿರುವ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ. ಆ ಕಾಮಗಾರಿಗಳನ್ನು ಕಾರ್ಮಿಕರ ಮೂಲಕ ನಿರ್ವಹಿಸಿರುವ ಬಗ್ಗೆ ಮತ್ತು ಆ ಕಾರ್ಮಿಕರು ಜಾಬ್ ಕಾರ್ಡ್ ಹೊಂದಿರುವ ಬಗ್ಗೆ ಯಾವುದೇ ದಾಖಲೆಗಳನ್ನಾಗಲೀ ಅಥವಾ ಜಾಬ್ ಕಾರ್ಡ್‌ಗಳನ್ನಾಗಲೀ ತಮ್ಮ ತನಿಖಾ ವರದಿಯ ಜೊತೆ ಹಾಜರುಪಡಿಸಿರುವುದಿಲ್ಲ. ಸದರಿ ಕಾಮಗಾರಿ ನಿರ್ವಹಣೆ ಮಾಡಲು ಕಾರ್ಮಿಕರನ್ನು ಆ ಸ್ಥಳಕ್ಕೆ ಕೊಂಡೊಯ್ಯಲು ವಾಹನದ ಮೂಲಕ ಕರೆದುಕೊಂಡು ಹೋಗಿರುವ ಬಗ್ಗೆ ಯಾವುದೇ ರಸೀದಿ ಮತ್ತು ವೋಚರುಗಳನ್ನು ಹಾಜರುಪಡಿಸಿರುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಆಪಾದಿತ ಸರ್ಕಾರಿ ನೌಕರರಾದ ಶ್ರೀ ಸಹದೇವ ಮಾಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಿಶ್ರಕೋಟಿ ಗ್ರಾಮ ಪಂಚಾಯತಿ (ಪ್ರಸ್ತುತ ಜಿನ್ನೂರ್ ಗ್ರಾ.ಪಂ.), ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ರವರು ಕೆರೆ ಕಾಮಗಾರಿಯಲ್ಲಿ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿಯ ಮಾರ್ಗಸೂಚಿಗಳನ್ನು ಸರಿಯಾಗಿ ಅನುಸರಿಸದೇ ರೂ.2,99,628/- ಗಳ ಮೊತ್ತವನ್ನು ದುರುಪಯೋಗಪಡಿಸಿಕೊಂಡು ಕರ್ತವ್ಯಲೋಪವೆಸಗಿರುತ್ತಾರೆ."

ಮೇಲೆ ಓದಲಾದ (3)ರಲ್ಲಿ ಪ್ರಕರಣದ ಸಂಬಂಧ ಮಾನ್ಯ ಉಪಲೋಕಾಯುಕ್ತರು ದಂಡನೆ ವಿಧಿಸಲು ಶಿಫಾರಸ್ಸು ಮಾಡಿರುವ ಹಿನ್ನೆಲೆಯಲ್ಲಿ ಆಕ್ಷೇಪಣೆಗಳನ್ನು ಆಹ್ವಾನಿಸಿ ಸದರಿ ನೌಕರರಿಗೆ ಎರಡನೇ ಕಾರಣ ಕೇಳಿ ನೋಟೀಸ್ ನೀಡಲಾಗಿತ್ತು.

ಮೇಲೆ ಓದಲಾದ (4)ರಲ್ಲಿ ರಂದು ಆರೋಪಿತ ನೌಕರರು ಎರಡನೇ ಕಾರಣ ಕೇಳಿ ನೋಟೀಸ್‌ಗೆ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

1) ಧಾರವಾಡ ಜಿಲ್ಲಾ ಕಲಘಟಗಿ ತಾಲ್ಲೂಕು ಮಿಶ್ರಿಕೋಟಿ ಗ್ರಾಮ ಪಂಚಾಯಿತಿ ಇಲ್ಲಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ಅಂತಾ ಕಾರ್ಯ ನಿರ್ವಹಿಸುತ್ತಿರುವ ಅವಧಿಯಲ್ಲಿ, 2013-14ನೇ ಸಾಲಿನಲ್ಲಿ ಬಾಳರಾಮಕೆರೆ ಕಾಮಗಾರಿಗೆ ಅನುದಾನವನ್ನು ನೀಡಿದ್ದು, ಕಾಮಗಾರಿ ಅನುಮೋದನೆ ಪತ್ರವನ್ನು ಸಹ ಹೊರಡಿಸಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಅಧಿನಿಯಮದನ್ವಯ ಕೂಲಿ ಕಾರ್ಮಿಕರನ್ನು ನೇಮಿಸಿದ್ದು, ಅವರನ್ನು ನೇಮಿಸುವಾಗ ಅರ್ಜಿಯನ್ನು ಕಾನೂನು ರೀತ್ಯಾ ಪಡೆದು ಕೂಲಿ ಕಾರ್ಮಿಕರಿಗೆ ಕಾನೂನಿನನ್ವಯ ಅಧಿಕೃತ ರಸೀದಿ ವೋಚರ್ ಗಳನ್ನು ಪಡೆದು ಹಣವನ್ನು eFMS ಮೂಲಕ ನೇರವಾಗಿ ಕೂಲಿಕಾರರ ಖಾತೆಗೆ ಬಟಾವಡೆ ಮಾಡಲಾಗಿದೆ.
2) ಹೀಗಿರುವಾಗ ಕರ್ನಾಟಕ ಲೋಕಾಯುಕ್ತ ಇಲ್ಲಿ ದೂರು ಸಲ್ಲಿಸಿದ್ದು, ಮಾನ್ಯ ಕರ್ನಾಟಕ ಲೋಕಾಯುಕ್ತ ಅಧಿಕಾರಿಗಳು ಅವರ ಕಛೇರಿಗೆ ಹಾಜರಾಗಿ ಸೂಕ್ತ ದಾಖಲೆಗಳನ್ನು ನೀಡುವಂತೆ ತಿಳಿಸಿದ್ದು, ನಾನು ಪಡೆದಂತಹ ನೋಟೀಸಿನ ಪ್ರತಿ ನನ್ನ ಕೆಲಸದ ಒತ್ತಡದನ್ವಯ ಮರೆತಿದ್ದರಿಂದ ಕರ್ನಾಟಕ ಲೋಕಾಯುಕ್ತ ಅವರು ನಿಗಧಿಪಡಿಸಿದ ದಿನದಂದು ಸೂಕ್ತ ದಾಖಲೆಗಳನ್ನು ಇಲಾಖೆಗೆ ಸಲ್ಲಿಸಲಾಗಿರುವುದಿಲ್ಲ.
3) ನಾನು ಯಾವುದೇ ರೀತಿಯ ಹಣವನ್ನು ಸದರಿ ಯೋಜನೆ ಅಡಿಯಲ್ಲಿ ದುರುಪಯೋಗಪಡಿಸಿಕೊಂಡಿರುವುದಿಲ್ಲ. ಸದರಿ ಕಾಮಗಾರಿ ಪ್ರಾರಂಭವಾದ ದಿನದಿಂದ ಕೊನೆಯ ಹಂತದವರೆಗೂ ಯೋಗ್ಯ ಅರ್ಜಿ, ರಸೀದಿ, ವೋಚರ್‌ಗಳನ್ನು ಸಂಬಂಧಪಟ್ಟ ಕಾರ್ಮಿಕರಿಂದ ಪಡೆದು ಆ ಕುರಿತಾಗಿ ಗ್ರಾಮ ಪಂಚಾಯಿತಿ ಅಧ್ಯಕ್ಷರ ನಜರಿಗೆ ತಂದು ಘನ ಸರ್ಕಾರಕ್ಕೆ ಕಳುಹಿಸಿದ್ದು ಇರುತ್ತದೆ.
4) ಸದರಿ ಅರ್ಜಿ, ವೋಚರ್, ರಸೀದಿ, ಕಾಮಗಾರಿಯ ಛಾಯಾಚಿತ್ರಗಳು, ಅಳತೆ ಪುಸ್ತಕ, ಹಾಗೂ ಇನ್ನಿತರ ಮೂಲ ದಾಖಲೆಗಳು ಸಂಬಂಧಪಟ್ಟ ಇಲಾಖೆಯ ಬಳಿ ಇದ್ದು, ನಾನು ಕಾರ್ಯ ನಿರ್ವಹಿಸುತ್ತಿದ್ದ ಮಿಶ್ರಿಕೋಟಿ ಗ್ರಾಮ ಪಂಚಾಯಿತಿಯಲ್ಲಿನ ನಕಲು ಪ್ರತಿಗಳನ್ನು ಪಡೆದುಕೊಂಡಿದ್ದು, ಈ ಅರ್ಜಿಯ ಲಗತ್ತ ಕಾಮಗಾರಿ ಕುರಿತಾಗಿ ಪಡೆದುಕೊಂಡಂತಹ ಅರ್ಜಿ, ರಸೀದಿ, ಮತ್ತು ಕಾರ್ಮಿಕರ ಸಹಿ ಇರುವ ಯಾದಿ ಇವುಗಳನ್ನು ಲಗತ್ತಿಸಿದ್ದು, ಮೇ: ರವರು ಅದನ್ನು ಪರಿಶೀಲಿಸಿ ನನ್ನ ಮೇಲೆ ಯಾವುದೇ ರೀತಿಯ ಕಾನೂನು ಕ್ರಮವನ್ನು ಕೈಗೊಳ್ಳಬಾರದೆಂದು ಈ ಮೂಲಕ ವಿನಂತಿಸಿಕೊಳ್ಳುತ್ತೇನೆ.

ವಿಚಾರಣಾಧಿಕಾರಿಯವರು ಸಾಕ್ಷ್ಯಾಧಾರಗಳು, ಹೇಳಿಕೆಗಳು ಮತ್ತು ದಾಖಲೆಗಳನ್ನು ಪರಿಶೀಲಿಸಿ ಆರೋಪಗಳು ಸಾಬೀತಾಗಿ ವರದಿ ಸಲ್ಲಿಸಿದ್ದು, ಈ ಹಿನ್ನೆಲೆಯಲ್ಲಿ, ಕಾರ್ಯದರ್ಶಿ ಮತ್ತು ಗ್ರಾಮ ಪಂಚಾಯತಿ ಅಧ್ಯಕ್ಷರಿಂದ ದುರುಪಯೋಗದ ಮೊತ್ತವನ್ನು ಸಮನಾಗಿ ರೂ.1,49,814/- ಗಳನ್ನು, ಇಬ್ಬರಿಂದ ಒಟ್ಟು 2,99,628/- ಗಳನ್ನು ವಸೂಲಿ ಮಾಡಬೇಕಾಗಿರುವುದರಿಂದ, ಶ್ರೀ ಸಹದೇವ ಮಾಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಿಶ್ರಕೋಟಿ ಗ್ರಾಮ ಪಂಚಾಯತಿ (ಪ್ರಸ್ತುತ ಜಿನ್ನೂರ್ ಗ್ರಾ.ಪಂ.), ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ವೇತನ ಭತ್ಯೆಗಳಿಂದ ಅಥವಾ ನಿವೃತ್ತಿಯಾಗಿದ್ದಲ್ಲಿ ಪಿಂಚಣಿ ಭತ್ಯೆಗಳಿಂದ ದುರುಪಯೋಗದ ಮೊತ್ತ ರೂ.1,49,814/- ಗಳನ್ನು ವಸೂಲಿ ಮಾಡುವ ದಂಡನೆಯನ್ನು ವಿಧಿಸಲು ಶಿಫಾರಸ್ಸು ಮಾಡಿರುತ್ತಾರೆ.

ಸರ್ಕಾರವು ಪರಿಶೀಲಿಸಿ, ಸದರಿ ಪ್ರಕರಣದ ಕುರಿತು ಅಪರ ನಿಬಂಧಕರು ವಿಚಾರಣೆಗಳು-8, ಕರ್ನಾಟಕ ಲೋಕಾಯುಕ್ತ ರವರು ಇಲಾಖಾ ವಿಚಾರಣೆ ನಡೆಸಿ ವರದಿ ಸಲ್ಲಿಸಿದ್ದು, ಸದರಿ ನೌಕರರ ವಿರುದ್ಧದ ಆರೋಪಗಳು ಸಾಬೀತಾಗಿರುವುದಕ್ಕೆ ವಿವರವಾದ ಕಾರಣಗಳನ್ನು ನೀಡಿರುತ್ತಾರೆ. ಪ್ರಮುಖ ಅಂಶಗಳು ಕೆಳಗಿನಂತಿವೆ.

14. PW1 has re-iterated the facts stated in his complaint. Complaint is marked as Ex.P3. Form no.1 and 2 are marked as Ex.P1 and P2. He has stated that 20 Grama Panchayat members have also authorized him to file the complaint as per Ex.P4. Report of the IO i.e., AEE-V, Technical Wing is also available in the file.

15. On going through the oral evidence and documents it is seen that the DGO who was working as i/c PDO, pf Mishrikoti GP has misused the funds which was sanctioned under the NREGA Scheme and has not maintained proper documents for payment of money to the workers. It is also seen that bogus records are created.

16.The evidence of PW1 and the documents produced on behalf of Disciplinary Authority are not challenged. DGO remained absent inspite of sevice of Articles of chargeand has been placed ex-parte. There is nothing to disbelieve placed by Disciplinary Authority.

17.For the aforesaid reasons, I am the opinion that the Disciplinary Authority has proved the charges against the DGO.

ಆರೋಪದ ತೀರ್ವತೆಗೆ ಅನುಗುಣವಾಗಿ ಮಾನ್ಯ ಉಪಲೋಕಾಯುಕ್ತರು ಶ್ರೀ ಸಹದೇವ ಮಾಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಿಶ್ರಕೋಟಿ ಗ್ರಾಮ ಪಂಚಾಯತಿ (ಪ್ರಸ್ತುತ ಜಿನ್ನೂರ್ ಗ್ರಾ.ಪಂ.), ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ವೇತನ ಭತ್ಯೆಗಳಿಂದ ಅಥವಾ ನಿವೃತ್ತಿಯಾಗಿದ್ದಲ್ಲಿ ಪಿಂಚಣಿ ಭತ್ಯೆಗಳಿಂದ ದುರುಪಯೋಗದ ಮೊತ್ತ ರೂ.1,49,814/- ಗಳನ್ನು ವಸೂಲಿ ಮಾಡುವ ದಂಡನೆಯನ್ನು ಶಿಫಾರಸ್ಸು ಮಾಡಿರುತ್ತಾರೆ. ಈ ಹಿನ್ನೆಲೆಯಲ್ಲಿ ಸದರಿ ನೌಕರರು 2ನೇ ಕಾರಣ ಕೇಳುವ ನೋಟೀಸಿಗೆ ನೀಡಿರುವ ಉತ್ತರವನ್ನು ಅಂಗೀಕರಿಸಲು ಬರುವುದಿಲ್ಲ. ಮತ್ತು ವಿಚಾರಣಾ ವರದಿ ಹಾಗೂ ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಒಪ್ಪುವುದು ಸಮಂಜಸವೆಂದು ಕಂಡು ಬರುತ್ತದೆ. ಈ ಹಿನ್ನೆಲೆಯಲ್ಲಿ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರ ಶಿಫಾರಸ್ಸನ್ನು ಅಂಗೀಕರಿಸಿ, ಶ್ರೀ ಸಹದೇವ ಮಾಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಿಶ್ರಕೋಟಿ ಗ್ರಾಮ ಪಂಚಾಯತಿ (ಪ್ರಸ್ತುತ ಜಿನ್ನೂರ್ ಗ್ರಾ.ಪಂ.), ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ವೇತನ ಭತ್ಯೆಗಳಿಂದ ಅಥವಾ ನಿವೃತ್ತಿಯಾಗಿದ್ದಲ್ಲಿ ಪಿಂಚಣಿ ಭತ್ಯೆಗಳಿಂದ ದುರುಪಯೋಗದ ಮೊತ್ತ ರೂ.1,49,814/- ಗಳನ್ನು ವಸೂಲಿ ಮಾಡುವ ದಂಡನೆಯನ್ನು ವಿಧಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 521 ಗ್ರಾಪಂಕಾ 2016(ಭಾಗ-1), ಬೆಂಗಳೂರು, ದಿನಾಂಕ: 07.09.2018**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ, ಮಾನ್ಯ ಉಪಲೋಕಾಯುಕ್ತರವರ ವರದಿಯಲ್ಲಿನ ಶಿಫಾರಸ್ಸಿನನ್ವಯ, ಶ್ರೀ ಸಹದೇವ ಮಾಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಿಶ್ರಕೋಟಿ ಗ್ರಾಮ ಪಂಚಾಯತಿ (ಪ್ರಸ್ತುತ ಜಿನ್ನೂರ್ ಗ್ರಾ.ಪಂ.), ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರ ವೇತನ ಭತ್ಯೆಗಳಿಂದ ಅಥವಾ ನಿವೃತ್ತಿಯಾಗಿದ್ದಲ್ಲಿ ಪಿಂಚಣಿ ಭತ್ಯೆಗಳಿಂದ ದುರುಪಯೋಗದ ಮೊತ್ತ ರೂ.1,49,814/- ಗಳನ್ನು ವಸೂಲಿ ಮಾಡುವ ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,
11/9/18
(ಮುಬಾರಕ್ ಅಹ್ಮದ್)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ,

1) ಮಹಾಲೇಖಪಾಲರು, ಕರ್ನಾಟಕ ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತ-1 ರವರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
4) ಅಪರ ನಿಬಂಧಕರು ವಿಚಾರಣೆಗಳು-8, ಕರ್ನಾಟಕ ಲೋಕಾಯುಕ್ತ, ಬೆಂಗಳೂರು.
5) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಧಾರವಾಡ ಜಿಲ್ಲಾ ಪಂಚಾಯತಿ, ಹಾವೇರಿ.
6) ಕಾರ್ಯನಿರ್ವಾಹಕ ಅಧಿಕಾರಿ, ಕಲಘಟಗಿ ತಾಲ್ಲೂಕು ಪಂಚಾಯತಿ, ಕಲಘಟಗಿ, ಧಾರವಾಡ ಜಿಲ್ಲೆ. (ಸಂಬಂಧಿಸಿದ ನೌಕರರಿಗೆ ಆದೇಶದ ಪ್ರತಿಯನ್ನು ತಲುಪಿಸಿ, ಸರ್ಕಾರಕ್ಕೆ ಸ್ವೀಕೃತಿ ಸಲ್ಲಿಸುವಂತೆ ಕೋರಿದೆ.)
7) ಶ್ರೀ ಸಹದೇವ ಮಾಳೆ, ಪಂಚಾಯತಿ ಅಭಿವೃದ್ಧಿ ಅಧಿಕಾರಿ, ಮಿಶ್ರಕೋಟಿ ಗ್ರಾಮ ಪಂಚಾಯತಿ (ಪ್ರಸ್ತುತ ಜಿನ್ನೂರ್ ಗ್ರಾ.ಪಂ.), ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ
8) ಗಣಕಕೋಶ, ಗ್ರಾ.ಅ. ಮತ್ತು ಪಂ.ರಾಜ್ ಇಲಾಖೆ. – ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು.
9) ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿ.